# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:— ಬಳ್ಳಾರಿ ಜಿಲ್ಲೆ, ಶಿರಗುಪ್ಪ ಪಟ್ಟಣದ ಸಮಗ್ರಾಭಿವೃದ್ಧಿ ಯೋಜನೆಗೆ ಸರ್ಕಾರದ ಅಂತಿಮ ಅನುಮೋದನೆಗಾಗಿ ಸಲ್ಲಿಸುವ ಬಗ್ಗೆ.

ಓದಲಾಗಿದೆ:— 1. ಸರ್ಕಾರದ ಆದೇಶ ಸಂ. ನಅಇ 402 ಟಿಟಿಪಿ 97 ದಿ:28-1-78

2. ನಗರ ಯೋಜನಾ ನಿರ್ದೇಶಕರ ಪತ್ರ ಸಂ. ನಯೋ. ಉನಿ(ವಿವಿ) ಸಮಗ್ರಅಂಯೋ. ಸಿರಗುಪ್ಪ. 2000-01 ದಿ:20-5-2000.

— — —

<u>ಪ್ರಸ್ತಾವನೆ:</u>

ಮೇಲೆ ಕ್ರಮಾಂಕ(1)ರಲ್ಲಿ ಓದಲಾದ ದಿ:28-1-98ರ ಆದೇಶದನ್ವಯ ಬಳ್ಳಾರಿ ಜಿಲ್ಲೆ, ಸಿರಗುಪ್ಪ ಪಟ್ಟಣದ ಸಮಗ್ರಾಭಿವೃದ್ಧಿ ಯೋಜನೆಗೆ ತಾತ್ಕಾಲಿಕ ಅನುಮೋದನೆ ನೀಡಲಾಗಿರುತ್ತದೆ.

ಮೇಲೆ ಕ್ರಮಾಂಕ(2)ರಲ್ಲಿ ಓದಲಾದ ದಿ:20-5-2000ರ ಪತ್ರದಲ್ಲಿ ಸಮಗ್ರಾಭಿವೃದ್ಧಿ ಯೋಜನೆಯನ್ನು 2011ನೇ ಇಸವಿಗೆ ಗಮನದಲ್ಲಿಟ್ಟುಕೊಂಡು ತಯಾರಿಸಲಾಗಿದ್ದು ಒಟ್ಟು 760.00 ಹೆಕ್ಟೇರ ಪ್ರದೇಶ ಬೇಕಾಗಬಹುದೆಂದೂ 418.00 ಹೆಕ್ಟೇರ ಪ್ರದೇಶವನ್ನು ವಸತಿಗಾಗಿ(ಶೇ.55) ವಾಣಿಜ್ಯಕ್ಕಾಗಿ ಸುಮಾರು 17.23ಹೆಕ್ಟೇರ (2.27) ಕೈಗಾರಿಕೆಗಾಗಿ 63.00ಹೆಕ್ಟೇರ(2.30) ಪ್ರದೇಶವನ್ನು ಕಾಯ್ದಿರಿಸಲಾಗಿದೆ. ಅಗತ್ಯ ನಾಗರೀಕ ಸೌಲಭ್ಯಗಳಿಗೆ ಮತ್ತು ಬಯಲುಜಾಗ: ಉದ್ಯಾನವನಗಳಿಗೆ ಸೂಕ್ತ ಪ್ರದೇಶವನ್ನು ನಿಗದಿಗೊಳಿಸಿ ಯೋಜನೆಯನ್ನು ಕಾರ್ಯಾನುಷ್ಠಾನಕ್ಕೆ ತರಲು ಅಗತ್ಯ ವಲಯ ನಿಯಮಾವಳಿಗಳನ್ನು ರೂಪಿಸಿ ಕೆ.ಟಿ.ಸಿ.ಪಿ.ಕಾಯ್ದೆಯ ಪರಿಚ್ಛೇದ 12 ರಲ್ಲಿ ನಿರೂಪಿಸಿರುವ ಅಂಶಗಳಿಗೆ ಅನುಗುಣವಾಗಿ ಸದರಿ ಕಾಯ್ದೆ ಕಲಂ 13(3)ರನ್ವಯ ಅಂತಿಮ ಅನುಮೋದನೆ ನೀಡುವಂತೆ ನಗರ ಯೋಜನಾ ನಿರ್ದೇಶಕರು ಕೋರಿರುತ್ತಾರೆ.

ವಿಷಯವನ್ನು ಕೂಲಂಕುಷವಾಗಿ ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿರುತ್ತದೆ.

<u>ಸರ್ಕಾರಿ ಆದೇಶ ಸಂಖ್ಯೆ:ನಅಇ 19ಗುಅಪ್ರಾ.2001 ಬೆಂಗಳೂರು ದಿನಾಂಕ: 30-11-2001</u>

ಬಳ್ಳಾರಿ ಜಿಲ್ಲೆ ಸಿರಗುಪ್ಪ ಪಟ್ಟಣದ ಸಮಗ್ರಾಭಿವೃದ್ಧಿ ಯೋಜನೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 13(3) ರನ್ವಯ ಸರ್ಕಾರವು ಅಂತಿಮ ಅನುಮೋದನೆ ನೀಡಿದೆ.

ಸಮಗ್ರಾಭಿವೃದ್ಧಿ ಯೋಜನೆಗೆ ಅನುಮೋದನೆ ನೀಡಿದ ಗುರುತಾಗಿ ವರದಿ ಮತ್ತು ನಕಾಶೆಗಳ ಮೇಲೆ ಸರ್ಕಾರದ ಮುದ್ರೆಯನ್ನು ಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಅಹಮದ ಎ. ಮುಬ್ತದರ)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

1) ನಿರ್ದೇಶಕರು, ನಗರ ಯೋಜನಾ ಇಲಾಖೆ, ಬೆಂಗಳೂರು
(ವರದಿ ಮತ್ತು ನಕ್ಷೆಗಳನ್ನು ತೆಗೆದುಕೊಂಡು ಹೋಗುವುದು)
2) ಸದಸ್ಯ-ಕಾರ್ಯದರ್ಶಿ, ನಗರ ಯೋಜನಾ ಪ್ರಾಧಿಕಾರ ಪಟ್ಟಣ ಪಂಚಾಯತಿ ಸಿರಗುಪ್ಪ
ಬಳ್ಳಾರಿ ಜಿಲ್ಲೆ ( ವರದಿ ಮತ್ತು ನಕ್ಷೆಗಳನ್ನು ತೆಗೆದುಕೊಂಡು ಹೋಗುವುದು)
3) ಶಾಖಾ ರಕ್ಷಾ ಕಡತ : ಬಿಡಿಪ್ರತಿ.